ಮೂಲ ದಾವಾ ನಂ. 107/2014

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 11-08-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಜಿ. ವಿ. ಬಿ. ವಕೀಲರಿಂದಃ**

ನನ್ನ ತಂದೆ ಆಸ್ತಿಯನ್ನು 2015 ರಲ್ಲಿ ಮಾರಾಟ ಮಾಡಿದ ಮೇಲೆ ಬೆಂಗಳೂರಿಗೆ ಚಿಕಿತ್ಸೆಗೆ ಹೋಗಿ ಬಂದು ನನ್ನ ಚಿಕ್ಕಪ್ಪನ ಮನೆಯಲ್ಲಿ ವಾಸಮಾಡುತ್ತಿದ್ದರು. ಆ ರೀತಿ ಮಾರಾಟ ಮಾಡಿದ 1 ವರ್ಷದವರೆಗೂ ರವೀಂದ್ರ ನಾಯ್ಕರವರು ಆ ಮನೆಗೆ ಬಂದಿರುವುದಿಲ್ಲ. ಆ ರೀತಿ ಒಂದು ವರ್ಷವಾದ ಮೇಲೆ ರವೀಂದ್ರ ನಾಯ್ಕರು ಸದ್ರಿ ಮನೆಗೆ ಬಂದು ವಾಸ್ತವ್ಯ ಮಾಡಿರುತ್ತಾರೆ. ಈಗಲೂ ಸಹಾ ಸದ್ರಿ ಮನೆಯಲ್ಲಿ ರವೀಂದ್ರ ನಾಯ್ಕ ವಾಸ್ತವ್ಯ ಮಾಡುತ್ತಿದ್ದಾರೆ ಎಂದರೆ ಸರಿ. ರವೀಂದ್ರ ನಾಯ್ಕರಿಗೆ ಮಾರಾಟ ಮಾಡಿದ ಮೇಲೆ ಸದ್ರಿ ಊರಿನಲ್ಲಿ ನನ ತಂದೆಗೆ ಯಾವದೇ ಜಮೀನು ಇರುವುದಿಲ್ಲ. ನನ್ನ ತಂದೆಗೆ ಆರೋಗ್ಯ ಸರಿ ಇಲ್ಲದ ಕಾರಣ ಮತ್ತು ನಮ್ಮ ಮದುವೆ ಮಾಡುವ ಸಲುವಾಗಿ ಸದ್ರಿ ಜಮೀನನ್ನು ರವೀಂದ್ರ ನಾಯ್ಕರಿಗೆ ಮಾರಾಟ ಮಾಡಿರುತ್ತಾರೆ. ನನ್ನ ತಂದೆಗೆ ಯಾವದೇ ದುರ್ವ್ಯಸನ ಇರಲಿಲ್ಲ. ಅವರು ದುರ್ವ್ಯಸನದ ಆಧಾರದ ಮೇಲೆ ಯಾವದೇ ಸಾಲ ಮಾಡಿದ್ದು ಇರುವುದಿಲ್ಲ. ರವೀಂದ್ರ ನಾಯ್ಕ ರವರಗಿಗೆ ಮಾರಾಟ ಮಾಡುವ ಪೂರ್ವದಲ್ಲಿ ನೀವು ಸದ್ರಿ ಆಸ್ತಿಯಲ್ಲಿ ಪಾಲು ಕೇಳಿದ್ದೀರಾ ಎಂದರೆ ಸಾಕ್ಷಿ ನನ್ನ ಮದುವೆಯಾದ ಮೇಲೆ ಪಾಲು ಕೇಳಿದ್ದೇನೆ ಎಂದು ನುಡಿಯುತ್ತಾರೆ. ನಾನು ಆ ರೀತಿ ಪಾಲನ್ನು ಮೌಖಿಕವಾಗಿ ಕೇಳಿರುತ್ತೇನೆ. ಮೌಖಿಕವಾಗಿ ಪಾಲುಕೊಡುತ್ತೇನೆ ಎಂದು ನನ್ನ ತಂದೆ ಹೇಳಿದ್ದರು. ಆ ರೀತಿ ನಮಗೆ ಪಾಲು ಕೊಟ್ಟಿದ್ದು ಇರುವುದಿಲ್ಲ.

ನನ್ನ ತಂದೆಗೆ ಅವರ ಕುಟುಂಬದಿಂದ ಸುಮಾರು ಒಂದುವರೆಯಿಂದ ಎರಡು ಎಕರೆಯಷ್ಟು ಜಮೀನು ಪಾಲಿನ ಮೂಲಕ ಬಂದಿರುತ್ತದೆ. 5 ನೇ ಪ್ರತಿವಾದಿಗೆ ಒಂದುವರೆಯಿಂದ ಎರಡು ಎಕರೆಯಷ್ಟು ಜಮೀನು ಕೊಟ್ಟಿರುತ್ತಾರೆ. ನನ್ನ ತಂದೆ 5 ನೇ ಪ್ರತಿವಾದಿಗೆ ಮಾಡಿಕೊಟ್ಟಂತಹ ಕ್ರಯದಸ್ತಾವೇಜನ್ನು ಓದಿ ನೋಡಿರುವುದಿಲ್ಲ. ಯಾವ ಕಾರಣಕ್ಕಾಗಿ ಮತ್ತು ಎಷ್ಟು ಹಣಕ್ಕೆ ಕ್ರಯ ಕೊಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದ್ರಿ ಕ್ರಯದಸ್ತಾವೇಜಿನಲ್ಲಿ ಮನೆಯ ಬಗ್ಗೆ ಬರೆದಿದ್ದಾರಾ ಇಲ್ಲವಾ ನಾನು ನೋಡಿರುವುದಿಲ್ಲ. ದಾವಾ ಐಟಂ 2 ರ ಬಗ್ಗೆ ಸದ್ರಿ ಕ್ರಯದಸ್ತಾವೇಜಿನಲ್ಲಿ ಬರೆದಿದ್ದಾರಾ ಇಲ್ಲವಾ ನಾನು ನೋಡಿರುವುದಿಲ್ಲ. ದಾವಾ ಐಟಂ 2 ರ ಆಸ್ತಿಯ ಮನೆಯನ್ನು 5 ನೇ ಪ್ರತಿವಾದಿ ಸ್ವಂತವಾಗಿ ಕಟ್ಟಿಕೊಂಡಿದ್ದು ಅದು ಮೊದಲು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬುದ್ಧ್ಯಾಪೂರ್ವಕ 5 ನೇ ಪ್ರತಿವಾದಿಗೆ ನಷ್ಟ ಉಂಟುಮಾಡಬೇಕೆಂದು 5 ನೇ ಪ್ರತಿವಾದಿ ಕಟ್ಟಿದ ಮನೆಯನ್ನೂ ಕೂಡ ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಬಂದಂತಹ ಆಸ್ತಿಯಲ್ಲಿ ಎಷ್ಟು ಬಾಗಾಹಿತು ಮತ್ತು ಎಷ್ಟು ಉತ್ಪನ್ನ ಇತ್ತು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಉತ್ಪನ್ನ ಎಷ್ಟು ಮತ್ತು ಖರ್ಚು ಎಷ್ಟು ಎಂದು ನನಗೆ ಗೊತ್ತಿಲ್ಲ. ಸದ್ರಿ ಜಮೀನಿನ ವ್ಯವಹಾರವನ್ನು ಅವರೇ ಮಾಡುತ್ತಿದ್ದರು. ದಾವೆ ದಾಖಲಿಸಿದ ಮೇಲೆ ನಮ್ಮ ಮಧ್ಯೆ ಯಾವದೇ ರಾಜಿ ಪ್ರಸ್ತಾಪ ಆಗಿರುವುದಿಲ್ಲ. ಲಕ್ಷಗಟ್ಟಲೆ ದುಡ್ಡುಕೊಟ್ಟರೆ ನಾನು ಮತ್ತು ನನ್ನ ತಂದೆ ದಾವೆ ವಾಪಾಸು ಪಡೆಯುತ್ತೇವೆ ಎಂದು 5 ನೇ ಪ್ರತಿವಾದಿಗೆ ಹೇಳಿದ್ದೇವೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯಿಂದ ಹಣ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಕೃಷ್ಣಪ್ಪ ಸರ್ವೆ ನಂ. 30 ರಲ್ಲಿ 1 ಎಕರೆ 24 ಗುಂಟೆ ಜಾಗವನ್ನು 5 ನೇ ಪ್ರತಿವಾದಿಗೆ ಕೊಡುತ್ತೇನೆ ಎಂದು ಹೇಳಿದ್ದ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನನ್ನ ಚಿಕ್ಕಪ್ಪನ ದ್ವೇಷದಿಂದಾಗಿ ನಾನು ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ನಮ್ಮ ಮದುವೆಯ ಖರ್ಚಿಗೋಸ್ಕರ ಸದ್ರಿ ಆಸ್ತಿಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಅದನ್ನು ಮಾರಾಟ ಮಾಡುವಾಗ ನನ್ನ ಮದುವೆ

ಆಗಿಹೋಗಿತ್ತು ಎಂದು ನುಡಿಯುತ್ತಾರೆ. 2005 ನೇ ಇಸವಿಯ ಹೊತ್ತಿಗೆ ನನ್ನ ಅಕ್ಕನ ಮದುವೆ ಮಾತ್ರ ಆಗಿತ್ತು ಎಂದರೆ ಸಾಕ್ಷಿ ಆಗ ನನ್ನ ಅಕ್ಕನ ಮದುವೆಯಾಗಿದ್ದು ನಂತರ 2 ವರ್ಷಗಳ ನಂತರ ನನ್ನ ಮದುವೆ ಆಗಿರುತ್ತದೆ ಎಂದರೆ ನುಡಿಯುತ್ತಾರೆ. ಬುದ್ಧ್ಯಾಪೂರ್ವಕವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.